# ಸ್ವಾಮಿ ಅಭಯಾನಂದ (೧೮೯೦-೧೯೮೯)

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ** ಅನುವಾದ: **ಕುಮಾರಿ ಪಿ. ಉಷಾ**

**ರಾ**ಮಕೃಷ್ಣ ಮಠ-ಮಿಷನ್‌ಗೆ ಸೇರುವ ಮುಂಚಿನಿಂದಲೆ ಸ್ವಾಮಿ ಅಭಯಾನಂದಜಿಯವರೊಡನೆ (ಭರತ್ ಮಹಾರಾಜರ) ಆತ್ಮೀಯ ಸಂಪರ್ಕಕ್ಕೆ ಬರುವ ಸುಸಂದರ್ಭ ನನಗೆ ಒದಗಿತ್ತು. ಅವರು ಮಂದಿರದ ಎದುರಿನ ಮಿಷನ್ ಆಫೀಸಿನ ಕೆಳ ಅಂತಸ್ತಿನ ಪೂರ್ವದಿಕ್ಕಿನ ಕೋಣೆಯಲ್ಲಿರುತ್ತಿದ್ದರು. ದೇಶ-ವಿದೇಶಗಳ ಗಣ್ಯರು ಅವರ ಹತ್ತಿರ ಬರುತ್ತಿದ್ದರು. ಅವರು ಮಿತಭಾಷಿಯೂ, ಬುದ್ಧಿವಂತರೂ, ತೀಕ್ಷ್ಣ-ದೃಷ್ಟಿಯುಳ್ಳವರೂ, ದಾರುಣ ಸನ್ನಿವೇಶಗಳಲ್ಲಿ ದೃಢಚಿತ್ತರೂ ಆಗಿದ್ದರು. ಅವರೆಂದೂ ಶಾಸ್ತ್ರಗಳನ್ನು ಓದುತ್ತಿರುವುದೆ ಆಗಲಿ ಭಾಷಣಗಳನ್ನು ಕೊಡುತ್ತಿರುವುದೇ ಆಗಲಿ ನಾನು ಕಂಡಿಲ್ಲ. ಆದರೆ ಮಠದಲ್ಲಿ ಕುಳಿತು ಅನೇಕ ಸಾಧು ಹಾಗು ಭಕ್ತರ ನಾನಾ ಸಮಸ್ಯೆಗಳನ್ನು ಪರಿಹರಿಸುತ್ತಿದ್ದರು.

ಅವರು ಶ್ರೀಮಾತೆಯವರಿಂದ ದೀಕ್ಷೆಯನ್ನು ಪಡೆದ ಬಗೆ ಹಾಗೂ 'ಉದ್ಬೋಧನ'ದಲ್ಲಿ ಹಗಲಿರುಳೆನ್ನದೆ ಶಶಿ ಮಹಾರಾಜರ ಸೇವೆಯನ್ನು ಹೇಗೆ ಮಾಡಿದ್ದರೆಂಬುದನ್ನು ಕೇಳಿರುವೆ. ಶಶಿ ಮಹಾರಾಜರು ಆಗ T.B.ಯಿಂದ ಕಷ್ಟಪಡುತ್ತಿದ್ದರು. 'ಉದ್ಬೋಧನ'ದಲ್ಲಿ ವಿದ್ಯುಚ್ಛಕ್ತಿ ಇಲ್ಲದ ಆ ದಿನಗಳಲ್ಲಿ ಮಹಾರಾಜರ ಮೈಯ್ಯುರಿಯ ಉಪಶಮನಕ್ಕಾಗಿ ಸೇವಕರು ಬೀಸಣಿಗೆಯಿಂದ ಗಾಳಿ ಬೀಸುತ್ತಿದ್ದರು.

ಪ್ರಥಮ ವಿಶ್ವಯುದ್ಧದ ಸಮಯದಲ್ಲಿ ಮುದ್ರಣ ಕಾಗದದ ಅಭಾವವಿತ್ತು. 'ಪ್ರಬುದ್ಧ ಭಾರತ' ಪತ್ರಿಕೆಯನ್ನು ಆಗ ಮಾಯಾವತಿಯಲ್ಲಿ ಮುದ್ರಿಸಲಾಗುತ್ತಿತ್ತು, ಹಾಗೂ ಭರತ್ ಮಹಾರಾಜರು ಅಲ್ಲಿ ಕೆಲಸ ಮಾಡುತ್ತಿದ್ದರು. ಸ್ವಾಮೀಜಿ ಪ್ರತಿಷ್ಠಾಪಿಸಿದ ಪತ್ರಿಕೆಯ ಧಾರಾವಾಹಿಯು ರದ್ದಾಗಬಾರದೆಂದು ಅವರು ಮಾಯಾವತಿಯಿಂದ ಲಕ್ನೌಗೆ ಕಾಲ್ನಡಿಗೆಯಲ್ಲಿ ಹೋಗಿ ಬೇಕಾದ ಕಾಗದವನ್ನು ಅಲ್ಲಿಂದ ಸಂಗ್ರಹಿಸಿ ಕತ್ತೆಯ ಮೇಲೆ ಹೇರಿಕೊಂಡು ಮತ್ತೆ ಮಾಯಾವತಿಗೆ ಹಿಂದಿರುಗುತ್ತಿದ್ದರು. ಇಂತಹ ಸಾಧುಗಳ ಆತ್ಮ ಬಲಿದಾನದಿಂದ ರಾಮಕೃಷ್ಣ ಸಂಘವು ಪ್ರತಿಷ್ಠಿತವಾಗಿದೆ. ಸ್ವದೇಶಿ ಆಂದೋಲನದ ಕಾಲದಲ್ಲಿ ಜವಹರಲಾಲ್ ನೆಹರು ಜೈಲಿನಲ್ಲಿದ್ದಾಗ ಭರತ್ ಮಹಾರಾಜರು ಅನೇಕ ಪುಸ್ತಕಗಳನ್ನು ಅವರಿಗೆ ಕೊಂಡು ಕಳುಹಿಸುತ್ತಿದ್ದರೆಂದೂ ಕೇಳಿದ್ದೇನೆ. ಅದೇ ಸಮಯ ಜೈಲಿನಲ್ಲಿದ್ದಾಗ ನೆಹರು ಅವರು 'Discovery of India' ವನ್ನು ಬರೆದರು. ನಂತರದ ಸಮಯದಲ್ಲಿ ಇಂದಿರಾ ಗಾಂಧಿ ಕಲ್ಕತ್ತೆಗೆ ಬಂದರೆ ಭರತ್ ಮಹಾರಾಜರನ್ನು ಭೇಟಿ ಮಾಡುತ್ತಿದ್ದರು. ಒಮ್ಮೆ ಬೇಲೂರು ಮಠದಲ್ಲೂ ಆಕೆಯನ್ನು ನೋಡಿದ್ದೇನೆ. ಹಬ್ಬ-ಹರಿದಿನಗಳಲ್ಲಿ ಆಕೆಗೆ ಪ್ರಸಾದವನ್ನು ಕಳುಹಿಸಲು ಭರತ್ ಮಹಾರಾಜರು ಹೇಳುತ್ತಿದ್ದರು.



ಅವರು ಬೇಲೂರು ಮಠದ ಮ್ಯಾನೇಜರ್ ಆಗಿದ್ದಾಗ ಸಾಧು-ಭಕ್ತರುಗಳ ಭೋಜನದ ಬಳಿಕವೇ ಅವರು ಊಟವನ್ನು ಮಾಡುತ್ತಿದ್ದುದು. ಸಂಧ್ಯಾರತಿಯು ನಡೆಯುತ್ತಿದ್ದರೆ, ಭಕ್ತರ ಪಾದರಕ್ಷೆಗಳು ಕದ್ದುಹೋಗದಂತೆ ಮಂದಿರದ ಎದುರು ಓಡಾಡುತ್ತಿದ್ದರು. ಉತ್ಸವಗಳ ದಿನದಂದು ಅವರು ತಮ್ಮ ಆಫೀಸಿನ ವರಾಂಡದಲ್ಲಿ ಕುಳಿತು ಭಕ್ತರ ಪ್ರಣಾಮ ಸ್ವೀಕರಿಸುತ್ತಿದ್ದರೆ, ನಾನು ಅವರು ನೀಡುವ ಕಾಣಿಕೆಯನ್ನು ತೆಗೆದಿರಿಸಿಕೊಳ್ಳುತ್ತಿದ್ದೆ. ಟ್ರೇನಿಂಗ್ ಸೆಂಟರ್‌ನಲ್ಲಿದ್ದಾಗ ಮಳೆಗಾಲ ಹಾಗೂ ಚಳಿಗಾಲದಲ್ಲಿ ಸ್ವಾಮೀಜಿಯವರ ಕೋಣೆಯಲ್ಲಿ ನಾನು ಜಪ-ಧ್ಯಾನಕ್ಕಾಗಿ ಕುಳಿತುಕೊಳ್ಳುತ್ತಿದ್ದೆ, ಏಕೆಂದರೆ ಒಂದು ಕೋಣೆಯಲ್ಲಿ ನಾಲ್ಕು ಜನ ಬ್ರಹ್ಮಚಾರಿಗಳಿದ್ದುದರಿಂದ ಯಾವ privacyಯೂ ಇರುತ್ತಿರಲಿಲ್ಲ. ಎಲ್ಲ ವಿಷಯಗಳಲ್ಲೂ ಮಹಾರಾಜರು ನನಗೆ ಸಾಕಷ್ಟು ಸ್ವಾತಂತ್ರ್ಯವನ್ನು ನೀಡಿದ್ದರು. ನಾನಾ ಕೆಲಸಗಳಲ್ಲಿ ನನ್ನನ್ನು ಪ್ರೋತ್ಸಾಹಿಸುತ್ತಿದ್ದರು.

ಸ್ವಾಮೀಜಿಯವರ ಕೊಠಡಿಯಲ್ಲಿದ್ದ ಪ್ರಿಯನಾಥ ಸಿಂಗರು ತಯಾರಿಸಿದ್ದ ಪರಿವ್ರಾಜಕ ಸ್ವಾಮೀಜಿಯವರ ತೈಲವರ್ಣ ಚಿತ್ರ ಹರಿದು ಹೋದಾಗ ನಾನು, ''ಮಹಾರಾಜ್, ಸ್ವಾಮೀಜಿಯವರ ಕೊಠಡಿಯನ್ನು ನೋಡಲು ದೇಶ-ವಿದೇಶಗಳಿಂದ ಜನರು ಬರುತ್ತಾರೆ. ಅಲ್ಲಿ ಸ್ವಾಮೀಜಿಯವರ ದೊಡ್ಡದೊಂದು ಧ್ಯಾನ ಮೂರ್ತಿಯನ್ನು ಇರಿಸಿದರೆ ಚೆನ್ನಾಗಿರುತ್ತದೆ,'' ಎಂದೆ. ಅವರು ಅದಕ್ಕೆ ಅನುಮತಿಸಿದರು. ನಾನು ಸ್ವಾಮೀಜಿಯವರ ಮೂಲ ಧ್ಯಾನಭಂಗಿಯ ಚಿತ್ರವನ್ನು ತೆಗೆದುಕೊಂಡು 'ಬಾಂಬೇ ಫೋಟೋ'ದಿಂದ 30"X40" ಗಾತ್ರದ ಚಿತ್ರವನ್ನು ತಯಾರು ಮಾಡಿ ಅವರ ಕೋಣೆಯ ಪೂರ್ವೋತ್ತರದ ಮೂಲೆಯಲ್ಲಿರಿಸಿದೆ. ನಂತರ ಶ್ರೀರಾಮಕೃಷ್ಣರ ಹಾಗು ಶ್ರೀಮಾತೆಯವರ ಚಿತ್ರಗಳನ್ನು ಅಮೆರಿಕದಿಂದ ತಯಾರಿಸಿ ತಂದು ಸ್ವಾಮಿ ಪ್ರಮೇಯಾನಂದಜಿಯವರ ಸಮಯದಲ್ಲಿ ಸ್ವಾಮೀಜಿ ಚಿತ್ರದ ಮೇಲ್ಗಡೆ ಇರಿಸಿದೆ.

ಭರತ್ ಮಹಾರಾಜರು ನನಗೊಂದು ದಿನ ಹೇಳಿದರು, ''ನೋಡು, ದೇಶ-ವಿದೇಶಗಳಿಂದ ಪ್ರಖ್ಯಾತ ವ್ಯಕ್ತಿಗಳು ಮಠಕ್ಕೆ ಬರುತ್ತಾರೆ. ಅವರಿಗೆ ಕೇವಲ ಪ್ರಸಾದವನ್ನು ಮಾತ್ರವೆ ಕೊಡುತ್ತೇವೆ. ಅವರಿಗೆ ಶ್ರೀರಾಮಕೃಷ್ಣರ-ಸ್ವಾಮೀಜಿಯವರ ಯಾವುದಾದರೂ ಪುಸ್ತಕವನ್ನು ಕೊಡಬಯಸುತ್ತೇನೆ. ನೀನು ಅದರ ಏರ್ಪಾಟು ಮಾಡು. ಅದಕ್ಕೆ ಬೇಕಾಗುವ ಹಣವನ್ನು ನಾನು ಕೊಡುತ್ತೇನೆ.'' ೧೯೭೧ನೆಯ ಇಸವಿ. ನಾನು ಸ್ವಾಮಿ ವಿವೇಕಾನಂದರ Ramakrishna and His Message ಹಾಗೂ ನಿವೇದಿತಾ ಬರೆದ Swamiji and His Message - ಈ ಎರಡು ಪುಸ್ತಕಗಳನ್ನು ಸಂಗ್ರಹಿಸಿದೆ. ಈಸ್ಟ್ ಎಂಡ್ ಪ್ರೆಸ್‌ನ ಮಾಲಿಕ್ ಪ್ರಭಾತ ಘೋಷ್ ಇವುಗಳನ್ನು ಮುದ್ರಿಸಿಕೊಟ್ಟರು. ಮಹಾರಾಜರಿಗೆ ಬಹಳ ಆನಂದವಾಯಿತು.

೧೯೭೧ರಲ್ಲಿ ನಾನು ಅಮೆರಿಕಕ್ಕೆ ಹೋಗುವ ಮುನ್ನ ಅವರು ನನಗೆ ಕೆಲವು ಪ್ರಾಯೋಗಿಕ ಉಪದೇಶಗಳನ್ನು ಕೊಟ್ಟಿದ್ದರು: ಶ್ರೀರಾಮಕೃಷ್ಣ-ಸ್ವಾಮೀಜಿಯವರ ಭಾವವನ್ನು ಪ್ರಚಾರ ಮಾಡು. ಆಧ್ಯಾತ್ಮಿಕ ಜೀವನದಲ್ಲಿ ಕಪಟತೆಗೆ ಸ್ಥಾನವಿಲ್ಲ. (ಭಾವ-ಮಂದಿರದಲ್ಲಿ ಕಳ್ಳತನವಿರಬಾರದು). ಬೇಲೂರು ಮಠಕ್ಕೆ ಪತ್ರವನ್ನು ಬರೆದಾಗ ನಿನ್ನ ಬಳಿ ಒಂದು ಪ್ರತಿಯನ್ನಿಟುಕೊ. ಪತ್ರದಲ್ಲಿ ಯಾವ ಭಾವುಕತೆಯನ್ನೂ ವ್ಯಕ್ತಪಡಿಸಬೇಡ. ಹಾಗೆ ಮಾಡಿದ ಪಕ್ಷದಲ್ಲಿ ನಮಗೆ ಯಾವುದೇ ನಿರ್ಧಾರ ತೆಗೆದುಕೊಳ್ಳಲಾಗುವುದಿಲ್ಲ. ಪತ್ರವನ್ನು ಬರೆದ ನಂತರ ಅದನ್ನು ಮತ್ತೊಮ್ಮೆ ಓದಿ ನೀನು ಬರೆದ ಪ್ರತಿಯೊಂದು ವಿಷಯವೂ ಸರಿಯೇ ಎಂಬುದನ್ನು ನೋಡು, ಇತ್ಯಾದಿ.

೧೯೭೧ರ ಮೇ ೩೧ರಂದು ಮುಂಬೈಯ ಗೇಟ್ ವೇ ಆಫ್ ಇಂಡಿಯಾದಲ್ಲಿ ಸ್ವಾಮಿ ಹಿರಣ್ಮಯಾನಂದರ ನೇತೃತ್ವದಲ್ಲಿ ಸ್ವಾಮೀಜಿಯವರ ಬೃಹತ್ ಕಂಚಿನ ಮೂರ್ತಿಯ ಉದ್ಘಾಟನೆಯ ಸಂದರ್ಭದಲ್ಲಿ ಪ್ರಭು ಮಹಾರಾಜ್, ಭರತ್ ಮಹಾರಾಜ್, ಸೂರ್ಯ ಮಹಾರಾಜ್ ಮುಂತಾದ ಗಣ್ಯ ಸಾಧುಗಳು ಉಪಸ್ಥಿತರಿದ್ದರು. ಪ್ರಭು ಮಹಾರಾಜ್ ನನಗೆ ಬಹಳವೇ ಉತ್ಸಾಹವನ್ನು ನೀಡುತ್ತಿದ್ದರು. ನಂತರ ಅವರೊಂದಿಗೆ ಪತ್ರ ಮೂಲಕ ವ್ಯವಹರಿಸುತ್ತಿದ್ದೆ. ಆ ಪತ್ರಗಳ ಕೆಲ ಅಂಶಗಳನ್ನು ಇಲ್ಲಿ ಉಲ್ಲೇಖಿಸುತ್ತಿರುವೆ.

೨೩.೬.೭೧: ಒಂದು ಮಾತು: ನೀನು ಬೋಧಕನಾಗಿ ಜನರಿಗೆ ಶಿಕ್ಷಣ ನೀಡುತ್ತಿರುವೆಯೆಂಬ ಭಾವನೆಯು ಕಡಿಮೆಯಿದ್ದಷ್ಟೂ ಒಳ್ಳೆಯದು. ಅಲ್ಲದೆ, ನೀನು ಅನೇಕ ವಿಷಯಗಳನ್ನು ಕಲಿಯಲು ಅಲ್ಲಿಗೆ ಹೋಗಿರುವೆಯೆಂದು ತಿಳಿಯುವ ಪ್ರಯತ್ನ ಮಾಡು. ಆಗಲೇ ನಿಜವಾಗಿಯೂ ನೀನು ಅಲ್ಲಿಗೆ ಹೋದ ಉದ್ದೇಶವು ಸಫಲವಾಗುವುದು.

ವಿಜಯದಶಮಿ, ೫.೧೦.೧೯೭೧: ನೀನು ಹೊಸದಾಗಿ ಆ ದೇಶಕ್ಕೆ ಹೋಗಿರುವೆ. ಇನ್ನೂ ಕಲಿಯುವುದು ಬೇಕಾದಷ್ಟಿದೆ. ನೀನು ಶಿಕ್ಷಾರ್ಥಿ. 'ಕಲಿಯುವುದೇ ನನ್ನ ಧರ್ಮ' ಎಂದು ಸ್ವಾಮೀಜಿ ಹೇಳಿದ್ದಾರೆ. 'ಜೀವನದುದ್ದಕ್ಕೂ ಕಲಿಯುವೆ' ಎಂಬ ಶ್ರೀರಾಮಕೃಷ್ಣರ ವಾಣಿಯನ್ನು ಹೃತ್ಪೂರ್ವಕವಾಗಿ ಗ್ರಹಿಸು. ಇದೇ ಜೀವನದಲ್ಲಿರಬೇಕಾದುದು.

೮.೫.೧೯೭೪: 'ಠಾಕೂರರು-ಶ್ರೀ ಮಾತೆಯವರನ್ನು ನಂಬಿ ಯಾವಾಗ ಸಾಧುವಾಗಲು ಹೊರಟೆಯೋ, ಸದಾ-ಸರ್ವದಾ ಅವರನ್ನೇ ಅವಲಂಬಿಸಿ. ಅಂತರ್ಯದಲ್ಲಿ ಅವರದೆ ಚಿಂತನೆಯನ್ನು ಮಾಡುತ್ತ ಆನಂದದಿಂದಿರು. ಸ್ವಾಮೀಜಿಯವರು ಅವಿರತವಾಗಿ ಶ್ರಮಿಸಿ ಈ ಸಂಘವನ್ನು ನಿರ್ಮಿಸಿರುವರು. ವಿಧೇಯತೆಯೇ ಮೊದಲು ಇರಬೇಕಾದುದು. ಸ್ವಾಮೀಜಿಯವರ ಈ ನಿರ್ದೇಶನವನ್ನು ಉಲ್ಲಂಘಿಸಿ ತಮಗಿಷ್ಟ ಬಂದಂತೆ ನಡೆಯುವವರು - ಕಿರಿಯರೇ ಆಗಲಿ, ಹಿರಿಯರೇ ಆಗಲಿ - ಎಂದೂ ಆಧ್ಯಾತ್ಮಿಕ ಉನ್ನತಿಯನ್ನು ಪಡೆಯಲಾರರು.

ಆತ್ಮಜ್ಞಾನವನ್ನು ಪಡೆಯುವುದೆ ನಮ್ಮ ಜೀವನದ ಉದ್ದೇಶ. ಈ ಉದ್ದೇಶವನ್ನು ತಲುಪುವುದಕ್ಕೆ ಕರ್ಮಮಾರ್ಗವನ್ನು ಆದರ್ಶವಾಗಿಯೂ ಅವಲಂಬಿಸಬೇಕು. 'ಠಾಕೂರರ ಕಾರ್ಯ'-ಇದೆ ಬಹುಮುಖ್ಯ. ಈ ದೇಶದಲ್ಲಾಗಲಿ ಆ ದೇಶದಲ್ಲಾಗಲಿ, ಮಾಡುವ ಕೆಲಸದಲ್ಲಿ ವ್ಯತ್ಯಾಸವೇನಿದೆ? ವೇದಾಂತದ ಅತ್ಯುತ್ತಮ ಸಿದ್ಧಾಂತವಾದ ಅಜರ-ಅಮರ-ಅಭಯ ಆತ್ಮದ ಕುರಿತು ಮಾತನಾಡಲು ಸಂಕೋಚವೇಕೆ? ಯಾವುದೇ ವೈಯಕ್ತಿಕ ಆಸಕ್ತಿಯನ್ನು ಇಟ್ಟಿಸಬೇಡ. ಸ್ವಾಮೀಜಿಯವರು ತೋರಿದಂಥ ಜೀವನಾದರ್ಶಗಳು ಆ ದೇಶಗಳಿಗೆ ಹೋಗುವ ನಮ್ಮ ಸಾಧುಗಳಲ್ಲಿ ಕಾಣಬೇಕು. ಯಾವ ಕಾರ್ಯವೇ ಆಗಲಿ, ಯಾವ ದೇಶದ ಕಾರ್ಯವೆ ಆಗಲಿ - ಎಲ್ಲವೂ ಠಾಕೂರರ ಕಾರ್ಯ ಎಂಬುದನ್ನು ನೆನಪಿನಲ್ಲಿಡಬೇಕು. ಏಕೆ ಇಷ್ಟೊಂದು ಚಿಂತಿಸುತ್ತಿ ?

ಇದ್ದಕ್ಕಿದ್ದಂತೆ ನಿನ್ನನ್ನುದೇಶಿಸಿ ಇವೆಲ್ಲ ನಾನು ಬರೆದದ್ದೇಕೆಂದು ನೀನು ಪ್ರಶ್ನಿಸಬಹುದು. ಬರೆಯಬೇಕೆಂದೆನಿಸಿತು, ಬರೆದೆ ಅಷ್ಟೆ. ಈ ಸತ್ಯವು ನಿನಗೆ ಅನ್ವಯಿಸುವಷ್ಟೆ ನಮಗೆಲ್ಲರಿಗೂ ಕೂಡ ಅನ್ವಯಿಸುತ್ತದೆ.

೧೬.೭.೧೯೭೬: ಸ್ವಾಮಿ ಪ್ರಭವಾನಂದರ ದೇಹತ್ಯಾಗದ ಬಗ್ಗೆ ವಿಸ್ತೃತ ವಿವರಗಳನ್ನೆಲ್ಲ ನಿನ್ನ ಪತ್ರದಿಂದ ತಿಳಿದೆ. ಅವರ ಅಗಲಿಕೆಯಿಂದ ನೀನು ಅನುಭವಿಸುತ್ತಿರುವ ಗಭೀರ ಶೂನ್ಯತೆಯನ್ನು ನಾನು ಚೆನ್ನಾಗಿಯೆ ಊಹಿಸಬಲ್ಲೆ. ಆದರೆ ಖಿನ್ನನಾಗಬೇಡ. ಠಾಕೂರರು ಸಕಲ ಶಕ್ತಿಗಳ ಮೂಲ. ಅವರು ಸತ್ಯಸ್ವರೂಪರೂ, ಪವಿತ್ರತಾಸ್ವರೂಪರೂ, ತ್ಯಾಗೀಶ್ವರರೂ ಆಗಿದ್ದು ಸತ್ಯನಿಷ್ಠೆ, ತ್ಯಾಗ, ಪವಿತ್ರತೆ ಹಾಗು ಸಂಯಮಗಳು ಇರುವಲ್ಲೆಲ್ಲ ಅವರು ಉಪಸ್ಥಿತರಾಗಿದ್ದು ಅಲ್ಲೆಲ್ಲ ಅವರ ಶಕ್ತಿಯು ಪ್ರಕಾಶಿಸುತ್ತದೆ. ವರ್ತಮಾನ ಪರಿಸ್ಥಿತಿಯಲ್ಲಿ ನೀವೆಲ್ಲಾ ಒಗ್ಗಟ್ಟಿನಿಂದ ಜೊತೆಯಾಗಿ ಆದರ್ಶದಲ್ಲಿ ನಿಷ್ಠೆಯುಳ್ಳವರಾಗಿ ಅವುಗಳನ್ನು

ಜೀವನದಲ್ಲಿ ಪ್ರಸ್ತುತಗೊಳಿಸಲು ಪ್ರಯತ್ನಿಸಿದರೆ ಎಲ್ಲ ಸಮಸ್ಯೆಗಳ ಪರಿಹಾರವಾಗುತ್ತದೆ. ಅಹಂಕಾರವನ್ನು ಹತ್ತಿಕ್ಕುವ ಪ್ರಯತ್ನದಲ್ಲಿ ನಾವು ತತ್ಪರರಾಗಬೇಕು. ಆಗಲೆ ಪರಸ್ಪರ ಶ್ರದ್ಧಾ-ಪ್ರೀತಿ ಹಾಗೂ ಯಥಾರ್ಥ ಪ್ರೀತಿ ಇವು ಅಚಲವಾಗಿ ಉಳಿಯುವುವು. ಇವೇ ಸಂಘಜೀವನಕ್ಕೆ ಅಗತ್ಯವಾಗಿಯೂ ಬೇಕಾಗಿರುವ ಗುಣಗಳು.

''ನಮ್ಮ ಸೋಲಿಗೆ ಕಾರಣವೆಂದರೆ ೧) ಪ್ರಾಮಾಣಿಕತೆಯ ಅಭಾವ ೨) ಭಾವ-ಮಂದಿರದಲ್ಲಿ ಕಳ್ಳತನ (ಕಪಟತೆ) ೩) ಮನಸ್ಸಿನಲ್ಲೊಂದು, ಮಾಡುವುದೊಂದು ಇದರಿಂದಾಗಿ ನಮ್ಮ ವೈಯಕ್ತಿಕ ಜೀವನವು ಕೆಡುತ್ತದೆ. ಮಾತ್ರವಲ್ಲ, ಇದರಿಂದ ಸಂಘಕ್ಕೂ ಕೆಡುಕು. ಆದ್ದರಿಂದಲೇ ವಿಧೇಯತೆ ಅತ್ಯಗತ್ಯ — ಇದರಿಂದ ಸಂಘವು ಶಕ್ತಿಯುತವಾಗುವುದು ಹಾಗು ಇದರ ಅಭಾವದಿಂದ ಸಂಘವು ದುರ್ಬಲಗೊಳ್ಳುವುದು. ಆದ್ದರಿಂದಲೆ ಸ್ವಾಮೀಜಿಯವರು ಸಾಧು ಜೀವನದಲ್ಲಿ ವಿಧೇಯತೆಗೆ ಅತ್ಯಂತ ಹೆಚ್ಚಿನ ಮಹತ್ವವನ್ನು ನೀಡಿರುವರು.''

ಈ ಹಿರಿಯ ಸಾಧುಗಳ ಆತ್ಮತ್ಯಾಗ, ಸಂಘದ ಮೇಲೆ ಅವರಿಗಿದ್ದ ಪ್ರೀತಿ, ನಿಷ್ಠೆಗಳನ್ನು ನಾವು ಕಲಿಯಬೇಕು. ೧೯೭೭ರಲ್ಲಿ ನಾನು ಸ್ವದೇಶಕ್ಕೆ ಹಿಂದಿರುಗಿದಾಗ ಭರತ್ ಮಹಾರಾಜರು ಮಠದ ಮ್ಯಾನೇಜರ್ ಆಗಿದ್ದರು. ತಾಯಿಯಂತೆ ನನ್ನನ್ನು ವಿಚಾರಿಸುತ್ತಿದ್ದರು, ''ಊಟ-ವಸತಿಗಳ ಬಗ್ಗೆ ಯಾವ ತೊಂದರೆಯೂ ಆಗುತ್ತಿಲ್ಲ, ತಾನೆ?'' ತಮ್ಮ ಆಫೀಸಿನಲ್ಲಿ ಕುಳಿತು ತುಂಬ ಹೊತ್ತು ನನ್ನೊಂದಿಗೆ ಮಾತನಾಡುತ್ತಿದ್ದರು. ಒಂದು ದಿನ ಸ್ವಾಮಿ ನಿತ್ಯ ಸ್ವರೂಪಾನಂದಜಿಯವರು (ಚಿಂತಾಹರಣ ಮಹಾರಾಜ್) ಭರತ ಮಹಾರಾಜರಿಗೆ ಹೇಳಿದರು, ''ಮಹಾರಾಜ್, ೧೮೮೬ ರಿಂದ ಠಾಕೂರರು ರವೆಯ ಪಾಯಸ ತಿನ್ನಲು ಪ್ರಾರಂಭಿಸಿದ್ದು ಇಂದಿಗೂ ಪ್ರತಿನಿತ್ಯವೂ ಅವರಿಗೆ ಅದನ್ನೆ ಕೊಡಲಾಗುತ್ತಿದೆ. ಅವರಗೀಗ ನಾಲಗೆಗೆ ಅರುಚಿಯೆನಿಸಿದೆ. ಬೇಲೂರು ಮಠದಲ್ಲಿ ಅವರ ಮೆನು ಸ್ವಲ್ಪ ಬದಲಾಯಿಸಿ!'' ಆಗ ಭರತ ಮಹಾರಾಜರು ಹೇಳಿದರು. ''ಸರಿ, ತಿಳಿಯಿತು ಬಿಡು! ಇತ್ತೀಚೆಗೆ ಠಾಕೂರರು ನಿನ್ನೊಡನೆ ಈ ಬಗೆಯ ಮಾತುಕತೆ ನಡೆಸುತ್ತಿದ್ದಾರೆ. ಅಲ್ಲವೆ? ಒಳ್ಳೆಯದು-ಹಾಗಾದರೆ ಮೆನು ಏನಾಗಬೇಕು?'' ಚಿಂತಾಹರಣ ಮಹಾರಾಜರು ತಮಗೆ ಮೆಚ್ಚುಗೆಯಾಗಿದ್ದ ಕೆಲವು ವಿಶೇಷ ಮತ್ಸ್ಯಮೇಲೋಗರಗಳ ಹೆಸರುಗಳನ್ನು ಹೇಳುತ್ತ ಹೋದರು. ಮಠದ ಇಬ್ಬರು ವೃದ್ಧ ಹಾಗೂ ಶ್ರೀಮಾತೆಯವರ ಶಿಷ್ಯರ ಮಾತುಗಳನ್ನು ಕೇಳಿ ನಾನು ನಗಲಾರಂಬಿಸಿದೆ.

ಭರತ್ ಮಹಾರಾಜರು ಭಗಿನಿ ನಿವೇದಿತಾರ ಬಗ್ಗೆ ಹೇಳಿದ್ದರು, ''ಒಂದು ದಿನ ಸಾಯಂಕಾಲ ನಿವೇದಿತಾ ಕಲ್ಕತ್ತದಿಂದ ಬೇಲೂರು ಮಠಕ್ಕೆ ದೋಣಿಯಲ್ಲಿ ಬಂದು ನೆಟ್ಟಗೆ ಹಳೆಯ ಮಂದಿರದ ಠಾಕೂರರ ಗುಡಿಗೆ ಹೋದರು.''

''ಇನ್ನೊಂದು ದಿನ ಸ್ವಾಮಿ ಪ್ರಜ್ಞಾನಂದರ ಬಗ್ಗೆ ನಿವೇದಿತಾ ಹೇಳಿದ್ದರು. ಮಾಯಾವತಿಯಲ್ಲಿ ನಾನು ಅವರೊಡನಿದ್ದೆ. ಅಸಾಧಾರಣ ವ್ಯಕ್ತಿತ್ವ ಅವರದು. ಮಠ-ಮಿಷನ್ನಿನಲ್ಲಿ ಅವರಂತಹ ಸ್ವತಂತ್ರ ಚಿಂತಕರು ಹಾಗೂ ಅವರಂತೆ ಮೌಲಿಕ ಚಿಂತನೆಗಳುಳ್ಳ ಸಾಧುಗಳು ವಿರಳ. ಅವರು 'ಭಾರತೇರ್ ಸಾಧನಾ' ಎಂಬ ಪುಸ್ತಕವನ್ನು ಬರೆದಿದ್ದರು.''

ಠಾಕೂರರು ಹೇಳುತ್ತಾರೆ, ''ಗುಣವಂತರನ್ನು ಗೌರವಿಸಬೇಕು'' ಎಂದು. ಭರತ್ ಮಹಾರಾಜರು ಜ್ಞಾನಿ ಹಾಗೂ ಗುಣಶೀಲರನ್ನು ಚೆನ್ನಾಗಿ ನೋಡಿಕೊಂಡು ಅವರ ಕುಶಲ ಸಮಾಚಾರವನ್ನು ಪಡೆಯುತ್ತಿದ್ದು ಅವರನ್ನು ಮಠ-ಮಿಷನ್ನಿನ ಭಕ್ತರನ್ನಾಗಿಸುತ್ತಿದ್ದರು.

ಈ ಬಗ್ಗೆ ಬೇಲೂರು ಮಠದ, ಮ್ಯಾನೇಜರ್ ಆಗಿದ್ದ ಬಾಬುರಾಮ ಮಹಾರಾಜರ ಒಂದು ಕಥೆ ಜ್ಞಾಪಕಕ್ಕೆ ಬರುತ್ತದೆ. 'ಉದ್ಬೋಧನ' ಆಫೀಸಿನ ಬ್ರಹ್ಮಚಾರಿ ಗಣೇನ್, ''ಬಾಬುರಾಮ ಮಹಾರಾಜರು ಮಠದಲ್ಲಿ ಹೋಟೆಲನ್ನು ತೆರೆದಿದ್ದಾರೆ. ಬರಿಯ ಭಕ್ತರಿಗೆ ಪ್ರಸಾದವನ್ನು ಕೊಡುತ್ತಾರೆ. ಆದ್ದರಿಂದ ಮಠ ಈಗ ನಷ್ಟದಲ್ಲಿ ನಡೆಯುತ್ತಿದೆ,'' ಎಂದು ಟೀಕಿಸಿದರು. ಜನರ ಬಾಯಿಯಿಂದ ಇದನ್ನು ಕೇಳಿದ ಬಾಬುರಾಮ ಮಹಾರಾಜರು, ಹೇಳಿದರು, ''ಗಣೇನ್ ಚಿಕ್ಕ ಹುಡುಗ. ಅವನಿಗೇನು ಗೊತ್ತು? ಭಕ್ತರ ಭಕ್ತಿಯು ಸ್ವಲ್ಪ ವೃದ್ಧಿಯಾಗಲೆಂದು ನಾನವರಿಗೆ ಪ್ರಸಾದವನ್ನು ಕೊಡುತ್ತೇನೆ. ಆ ಭಕ್ತಿಯ ಬಲದಿಂದ ಅವರು 'ಉದ್ಬೋಧನ' ಕ್ಕೆ ಹೋಗಿ ಠಾಕೂರ್ ಹಾಗೂ ಸ್ವಾಮೀಜಿಯವರ ಪುಸ್ತಕಗಳನ್ನು ಕೊಂಡುಕೊಳ್ಳುತ್ತಾರೆ. ಠಾಕೂರರ ಪ್ರಸಾದದ ಗುಣದಿಂದಲೇ 'ಉದ್ಬೋಧನ'ದ ಪುಸ್ತಕಗಳು ಮಾರಾಟವಾಗುತ್ತಿರುವುದು!''

ಉತ್ಸವಗಳಂದು ಭರತ್ ಮಹಾರಾಜರು ನಕುರದ (ಒಂದು ಅಂಗಡಿಯ ಹೆಸರು) ಘನ- ಪಾಕದ ಸಂದೇಶವನ್ನು ಠಾಕೂರರಿಗೆ ನಿವೇದಿಸಿ ದೇಶ, ವಿದೇಶಗಳಿಗೆ ಕಳುಹಿಸುತ್ತಿದ್ದರು. ಬೇಲೂರು ಮಠದಲ್ಲಿ ಅವರು ತಾಯಿಯಂತೆ ಭಕ್ತರ ಸೇವೆ ಮಾಡುತ್ತಿದ್ದರು. ಅಸ್ವಸ್ಥರಾಗಿದ್ದ ಸಾಧುಗಳು ಹೆಚ್ಚು ಹಾಲು ಪಡೆಯುವಂತೆ ನಿಗಾ ವಹಿಸುತ್ತಿದ್ದರು. ಭಕ್ತರ ಸೇವೆ ಹಾಗೂ ಶ್ರೀರಾಮಕೃಷ್ಣರ ಪೂಜೆಗಳಲ್ಲಿ ಅವರು ಯಾವುದೇ ವ್ಯತ್ಯಾಸವನ್ನು ಕಾಣುತ್ತಿರಲಿಲ್ಲ.

''ಎಷ್ಟು ಗುಪ್ತರೋ ಅಷ್ಟು ಶಕ್ತರು; ಎಷ್ಟು ವ್ಯಕ್ತರೋ ಅಷ್ಟು ತ್ಯಕ್ತರು,'' ಎಂಬ ಮಾತಿದೆ. ವೈಯಕ್ತಿಕ ಜೀವನದಲ್ಲಿ ಭರತ್ ಮಹಾರಾಜರು ಅತ್ಯಂತ ಗುಪ್ತರಾಗಿದ್ದರು. ತಮ್ಮ ವಿಷಯವಾಗಿ ಅವರು ಏನನ್ನೂ ಹೇಳಿಕೊಳ್ಳುತ್ತಿರಲಿಲ್ಲ. ಮಠ-ಮಿಷನ್ನಿನ ಯಾವುದೇ ಸಮಸ್ಯೆಗಳಿಗೂ ಸೂಕ್ತ ಸಲಹೆಯನ್ನು ನೀಡುವವರಾಗಿದ್ದರು. ದೀರ್ಘಕಾಲ ರಾಮಕೃಷ್ಣ ಸಂಘದ ಸೇವೆಯನ್ನು ಮಾಡಿದ ಅವರು ಚಿರಸ್ಮರಣೀಯರಾಗಿದ್ದಾರೆ.